

KARNATAKA SANGHA QATAR
ಕರ್ನಾಟಕ ಸಂಘ, ಕತಾರ್


# ಶ್ರೀಗಂಧ


## ರಾಜ್ಯೋತ್ಸವ ವಿಶೇಷಾಂಕ
## ನವೆಂಬರ್ ೨೦೦೬


ಕೆಂಪೇಗೌಡ



ಕಿತ್ತೂರು ರಾಣಿ ಚೆನ್ನಮ್ಮ



ಗೋಲ್ ಗುಂಬಜ್



ಜಂಬೂ ಸವಾರಿ



ಸರ್. ಎಮ್. ವಿಶ್ವೇಶ್ವರಯ್ಯ

ಸುವರ್ಣ ಕರ್ನಾಟಕ


ಜೋಗ್ ಫಾಲ್ಸ್


ವಿಧಾನ ಸೌಧ


ಅ. ನ. ಕೃ


ಗೊಮ್ಮಟೇಶ್ವರ


ಡಾ|| ರಾಜಕುಮಾರ್

Ambassador

भारतीय राजदूतावास
السفارة الهندية
EMBASSY OF INDIA
P.O.Box 2788, DOHA- QATAR
Tel.:(974)4672025,Fax:4670448
E-Mail: ambassor@qatar.net.qa
: indembdh@qatar.net.qa
Website: www.indianembassy.gov.qa



# MESSAGE

On the occasion of the 50th birthday of the State of Karnataka, may I congratulate the members of the Karnataka Sangha in Qatar and, through them, the millions sons and daughters of this lovely State.Whether it be in the field of intellectual contributions, dedicated humanitarian service, sports, cinema, performing arts or virtually any walk of life,Karnataka has made rich contributions to the splendor that is India.The 50th birthday is an apt moment to count one,s blessings and look forward with hope at ever more splendid achievements in days to come.

[Dr. George Joseph]

## ಅಧ್ಯಕ್ಷರ ನುಡಿ



ಪ್ರಿಯ ಆತ್ಮೀಯರೇ,

ನಮ್ಮ ರಾಜ್ಯ ಉದಯವಾಗಿ ಐವತ್ತು ವರ್ಷಗಳು ಕಳೆದಿವೆ. ೧೯೫೬ ನವೆಂಬರ್ ೧ ನೆಯ ದಿನಾಂಕದಂದು ನವ ಮೈಸೂರು ರಾಜ್ಯ ಸಂಘಟಿತವಾಯಿತು. ಈ ಸುವರ್ಣ ಮಹೋತ್ಸವದ ಶುಭ ಸಂದರ್ಭದಲ್ಲಿ ತಮ್ಮೆಲ್ಲರಿಗೂ ನನ್ನ ಹೃದಯ ಪೂರ್ವಕ ಶುಭಾಷಯಗಳು.

ಕನ್ನಡ ಭಾಷೆ ಸುಮಾರು ಎರಡು ಸಾವಿರ ವರ್ಷಗಳಿಂದ ಬೆಳೆದು ಬಂದಿದೆ. ಸಂಸ್ಕೃತ ಮತ್ತು ತಮಿಳು ಭಾಷೆ ಬಿಟ್ಟರೆ ಕನ್ನಡ ಭಾಷೆ ನಮ್ಮ ದೇಶದಲ್ಲಿ ಪ್ರಾಚೀನವಾದುದು.

ನಮ್ಮ ರಾಜಧಾನಿಯಾದ ಬೆಂಗಳೂರಿನಲ್ಲಿ ಜನರು ಕನ್ನಡಕ್ಕಿಂತ ಅನ್ಯ ಭಾಷೆಗಳನ್ನು ಬಳಸುವುದು ಹೆಚ್ಚಾಗಿದೆ. ಬೆಂಗಳೂರು ಮಾಹಿತಿ ತಂತ್ರಜ್ಞಾನಕ್ಕೆ ಜಗತ್ತಿನಲ್ಲೇ ಹೆಸರುವಾಸಿ ಆಗಿರುವುದು ನಮೆಲ್ಲರಿಗೂ ಹೆಮ್ಮೆಯ ವಿಷಯವೇ. ಆದರೂ ಇದರಿಂದ ದೇಶದ ನಾನಾ ಕಡೆಯಿಂದ ಬಂದು ನೆಲೆಸಿದ ಜನರ ಪ್ರಭಾವದಿಂದ ಕನ್ನಡ ಭಾಷೆಯ ಬಳಕೆ ಕೆಳಮುಖವಾಗಿದೆ. ನಮ್ಮವರು ಬಹಳ ವಿಶಾಲ ಹೃದಯ ಹೊಂದಿದವರು. ಹೊರ ನಾಡಿನಿಂದ ಬಂದವರಿಗೆ ಕನ್ನಡವನ್ನು ಕಲಿಸುವ ಬದಲು ಅವರ ಭಾಷೆಯನ್ನು ಕಲಿತು ಅವರೊಡನೆ ಸಂಭಾಷಿಸುತ್ತಾರೆ. ಈಗಲಾದರೂ ಮನೆಯ ಒಳಗೆ ಮತ್ತು ಹೊರಗೆ ಕನ್ನಡವೇ ಬಳಸಲಿ ಎಂದು ಆಶಿಸುತ್ತೇನೆ. ಹೊರನಾಡಿನಲ್ಲಿರುವ ನಾವು ಸಹ ಕನ್ನಡ ಭಾಷೆಯನ್ನು ಬಳಸಿ ಬೆಳಸಬೇಕಾಗಿದೆ.

ಆದಷ್ಟು ನಮ್ಮ ಕನ್ನಡ ಕಲಾವಿದರನ್ನು ಆಗಾಗ ಕರೆಸಿ, ಕನ್ನಡ ಭಾಷೆಯ ಶ್ರೀಮಂತಿಕೆಯ ಅರಿವನ್ನುಂಟು ಮಾಡಬೇಕು ಎಂದು ಕೋರುತ್ತೇನೆ.

ನಮ್ಮ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೂ ನನ್ನ ಹೃತ್ಪೂರ್ವಕ ವಂದನೆಗಳು ಮತ್ತು ಅಭಿನಂದನೆಗಳು. ಕತಾರಿನ ಏಳಿಗೆಗಾಗಿ ದುಡಿಯುವುದರೊಂದಿಗೆ ಕರ್ನಾಟಕ ಸಂಘ ಮತ್ತು ಕನ್ನಡದ ಅಭಿವೃದ್ಧಿಗಾಗಿ ಅತಿ ಹೆಚ್ಚಿನ ಕಳಕಳಿ ತೋರಿಸೋಣ.

-ಕೆ. ಪ್ರಭಾಕರ
ಅಧ್ಯಕ್ಷರು

# ಸಂದೇಶ



ಪ್ರಿಯ ಬಾಂಧವರೇ,

ಕರ್ನಾಟಕ ರಾಜ್ಯೋತ್ಸವ ಸುವರ್ಣಮಹೋತ್ಸವದ ಶುಭಸಮಾರಂಭಕ್ಕಾಗಿ ಪ್ರಗತಿಯ ಮಹಿಳೆಯರ ಪರವಾಗಿ ತಮ್ಮೆಲ್ಲರಿಗೂ ಶುಭಾಷಯಗಳು.

ಕನ್ನಡ ತುಂಬ ಶ್ರೀಮಂತ ಭಾಷೆ. ಅದು ನಮ್ಮೆಲ್ಲರ ಆಸ್ತಿ. ಕನ್ನಡದಲ್ಲಿ ಬರೆಯುವುದು, ಓದುವುದು ಮತ್ತು ಮಾತನಾಡುವುದು ಗೌರವದ ವಿಷಯ. ಕನ್ನಡವನ್ನು ತಿರಸ್ಕರಿಸದೆ ಅದನ್ನು ಪೋಷಿಸಿ ಬೆಳಸಬೇಕು. ಕನ್ನಡಕ್ಕಾಗಿ ಬೆಲೆ, ಕೀರ್ತಿಗಳನ್ನು ಗಳಿಸಬೇಕು. ಕನ್ನಡಿಗರು ಅಭಿಮಾನಿಗಳು, ಸಜ್ಜನರು, ಗುಣಶಾಲಿಗಳು, ವಿವೇಕಿಗಳು ಮತ್ತು ಆತ್ಮವಿಶ್ವಾಸ ಹೊಂದಿರುವ ಜನರೆಂದು ನಮಗೆಲ್ಲಾ ತಿಳಿದಿದೆ.

ನಮ್ಮ ಸಂಘದ ಮಹಿಳೆಯರು ಸತತ ಅಭ್ಯಾಸ ಮತ್ತು ಪರಿಶ್ರಮಗಳಿಂದ ಏನನ್ನಾದರೂ ಸಾಧಿಸಬಹುದು ಎಂದು ತೋರಿಸಿಕೊಟ್ಟಿದ್ದಾರೆ. ಹೀಗೆಯೇ ನೀವು ಮುಂದುವರಿದು ಎಲ್ಲರಿಗೂ ಸಂತೋಷ, ತೃಪ್ತಿಗಳನ್ನು ಕೊಟ್ಟು ಉಪಯೋಗವಾಗುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವೆವು ಎಂಬ ಭರವಸೆ ನನಗಿದೆ.

ನಾವು ಯಾವುದೇ ಕಾರ್ಯಕ್ರಮ ಅಥವಾ ಸ್ಪರ್ಧೆ ಏರ್ಪಡಿಸಿದರೂ ಅದರಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಪಾಲ್ಗೊಂಡು ತಮ್ಮಲ್ಲಿ ಅಡಗಿರುವ ಕೌಶಲ್ಯತೆಯನ್ನು ಪ್ರದರ್ಶಿಸಬೇಕೆಂದು ಕೋರುತ್ತೇನೆ.

ಸಂಘದ ಎಲ್ಲಾ ಸದಸ್ಯರೂ ನಮ್ಮೆಲ್ಲರಿಗಾಗಿ ನೀಡುತ್ತಿರುವ ಬೆಂಬಲ ಮತ್ತು ಸಹಕಾರಕ್ಕಾಗಿ ನನ್ನ ಹೃತ್ಪೂರ್ವಕ ವಂದನೆಗಳು. ಮುಂಬರುವ ಹೊಸ ವರ್ಷ ಎಲ್ಲರಿಗೂ ಶುಭವನ್ನುಂಟು ಮಾಡಲಿ ಎಂದು ಕೋರುತ್ತೇನೆ. ನಾವೆಲ್ಲಾ ಒಂದೇ ತಾಯಿಯ ಮಕ್ಕಳು. ಕನ್ನಡ ತಾಯಿಗೆ ಜಯವಾಗಲಿ.

ತಮ್ಮ ವಿಶ್ವಾಸಿ

-ಸುಧಾ ಪ್ರಭಾಕರ
ಪ್ರಗತಿಯ ಅಧ್ಯಕ್ಷೆ

# <u>ಸಂಪಾದಕೀಯ....</u>



ಆತ್ಮೀಯ ಕನ್ನಡ ಬಾಂಧವರೇ,

**ಇದೇ ನಾಡು, ಇದೇ ಭಾಷೆ ಎಂದೆಂದೂ ನನ್ನದಾಗಿರಲಿ**
**ಎಲ್ಲೇ ಇರಲಿ, ಹೇಗೆ ಇರಲಿ**
**ಕನ್ನಡವು ನನ್ನ ಉಸಿರೆಂದೂ...**

ಇದು ನಿಜಕ್ಕೂ ಮೈಲಿಗಲ್ಲು. ಮಹತ್ವದ ದಿನ. ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಸುಸಂದರ್ಭ. ವೈಭವೋಪೇತವಾಗಿ ಸುವರ್ಣಮಹೋತ್ಸವದ ಆಚರಣೆಯಲ್ಲಿ ನಾಡಿನ ಸಮಸ್ತ ಬಾಂಧವರಿಗೂ ನನ್ನ ಹೃತ್ಪೂರ್ವಕ ಹಾರ್ದಿಕ ಶುಭಾಷಯಗಳು.

ಭಾಷಾವಾರು ವಿಂಗಡಣೆಯಲ್ಲಿ, ಹರಿದು ಹಂಚಿಹೋಗಿದ್ದ ನಾಡನ್ನು, ರಾಜಾಡಳಿತದ ಮೈಸೂರು ಸಂಸ್ಥಾನವನ್ನು, ಕನ್ನಡ ಭಾಷೆಯ ಹೆಸರಲ್ಲಿ ಒಂದಡಿ ತಂದು ಇಂದಿಗೆ ೫೦ ವರ್ಷಗಳು ಸಂದಿದೆ. ವಿಶಾಲ ಕರ್ನಾಟಕದ ಕಲ್ಪನೆ, ಕನಸು ಕಂಡವರು ಅನೇಕ ಮಹಾನುಭಾವರುಗಳು, ಕನ್ನಡದ ಕಲಿಗಳು, ಹೋರಾಟಗಾರರು. ಅವರ ಅಂದಿನ ಪರಿಶ್ರಮದ ಕಲ್ಪನೆಗೆ ಸಾಕಾರ ದೊರೆತಿದೆಯೇ? ಕನಸು ನನಸಾಗಿದೆಯೇ? ಕನ್ನಡ ಭಾಷೆಯ ಬಗೆಗಿನ ಪ್ರೀತಿ ಇಮ್ಮಡಿಯಾಗಿದೆಯೇ? ನಾಡಿನ ಬಗ್ಗೆ ಗೌರವಾದರಗಳು ಜಾಸ್ತಿಯಾಗಿದೆಯೇ?

ವಿಶೇಷವಾಗಿ ನಮ್ಮ ಕರ್ನಾಟಕದ ರಾಜಧಾನಿ ಬೆಂಗಳೂರಿನ ಬಗ್ಗೆ ಯೋಚಿಸಿದರೆ, ನಮ್ಮ ಭಾಷಾ-ಸಂಸ್ಕೃತಿಯ ಬಗ್ಗೆ ಚಿಂತೆ ಮೂಡುತ್ತದೆ. ಬೆಂಗಳೂರು ವಿಶ್ವ ಭೂಪಟದಲ್ಲಿ ಇಂದು ಬಹು ದೊಡ್ಡ ಹೆಗ್ಗುರುತು. ಐ.ಟಿ (ಇನ್ಫಾರ್ಮೇಶನ್ ಟೆಕ್ನಾಲಜಿ) - ಬಿ.ಟಿ. (ಬಯೋ ಟೆಕ್ನಾಲಜಿ)ಗಳ ಭರಾಟೆಯಲ್ಲಿ, ವಿಶ್ವ ನಗರವೆನಿಸಿಕೊಳ್ಳುವ ತರಾತುರಿಯಲ್ಲಿ ವಲಸಿಗರ ದಂಡು-ದಂಡೇ ನಗರವನ್ನು ಮುತ್ತಿಕೊಂಡಿದೆ. ಕನ್ನಡ ಕ್ಷೀಣಿಸತೊಡಗಿದೆ. ಕನ್ನಡ ಭಾಷೆ ಬಳಸಿದರೆ ಅವಮಾನಗೊಳ್ಳುವ ಪರಿಸ್ಥಿತಿ ಬಂದಿದೆ. ಇದು ಹೆಚ್ಚು-ಕಮ್ಮಿ ರಾಜ್ಯದ ಇತರೆಡೆಗಳ ಪ್ರಸ್ತುತ ಪರಿಸ್ಥಿತಿಯೂ ಹೌದು.

ಅನಿವಾಸಿ ಭಾರತೀಯರಾಗಿ, ನಾಡಿನ ಪ್ರಜೆಗಳಾಗಿ ಇಲ್ಲೇನೋ ಸುವರ್ಣ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಅದೇ ನಾವು ಊರಿನಲ್ಲೇ ಇದ್ದರೆ ಈ ಆಚರಣೆಗೆ ಮುಂದಾಗುತ್ತಿದ್ದೆವೆ? ಕನ್ನಡದ ಸ್ಥಿತಿ ಏಕೆ ಹೀಗಾಯಿತು. ನಾವುಗಳು ನಿರಾಭಿಮಾನಿಗಳೇ?

ಬನ್ನಿ ನಾವಿಂದು ಪ್ರತಿಜ್ಞೆ ಮಾಡೋಣ. ಕನ್ನಡ ಭಾಷೆಯ ಬಗ್ಗೆ ಚಿಂತಿಸುವ ದೀಕ್ಷೆ ತೊಡೋಣ. ಕನ್ನಡದ ಜ್ಯೋತಿಯನ್ನು ಸದಾ ಉಜ್ವಲ ನಂದಾದೀಪವಾಗುವ ಕೈಂಕರ್ಯ, ಮುಂದಿನ ಪೀಳಿಗೆ ಹಾಗು ಯುವ ತಲೆಮಾರಿಗೆ ಭಾಷಾಭಿಮಾನ, ನಾಡಿನ ಸಂಸ್ಕೃತಿಯ ಹಿರಿಮೆ-ಗರಿಮೆಗಳನ್ನು ಸದಾ ಸಾರುವ, ತಿಳಿಪಡಿಸುವ ಉತ್ಕೃಷ್ಟ ವಾಂಛೆ, ಅಭಿಲಾಷೆ, ಮನೋಧರ್ಮ ನಮ್ಮ ರಕ್ತದ ಕಣಕಣದಲ್ಲಿ ಮೂಡಿಬರಬೇಕು. ಹಾಗಾದಲ್ಲಿ ಮಾತ್ರ ಈ ಸುವರ್ಣ ವರ್ಷದ ನಾಡ ಹಬ್ಬಕ್ಕೆ ಒಂದು ಅರ್ಥ ಬಂದೀತೆಂಬ ನಂಬಿಕೆ ನನ್ನದು.

ಮಾತೃ ಭಾಷೆಯನ್ನು ಪ್ರೀತಿಸದವ, ತನ್ನ ಹೆತ್ತ ತಾಯಿಯನ್ನು ಪ್ರೀತಿಸಲಾರ ಎಂಬುದು ಅಪ್ಪಟ ಸತ್ಯ!

**ಕನ್ನಡಕೆ ಹೋರಾಡು ಕನ್ನಡದ ಕಂದ**
**ಕನ್ನಡವ ಕಾಪಾಡು ನನ್ನ ಆನಂದ.**
**ಕನ್ನಡ ನಾಡಿಗೆ ಜಯವಾಗಲಿ!**

**ಇಂತಿ ನಮನಗಳೊಂದಿಗೆ**
**ಶಾಲಿನಿ ಎಸ್. ಆಲೂರ್, ಸಂಪಾದಕರು**
Email : shalinialur@hotmail.com

ಸಂಚಿಕೆಯ ಬಗ್ಗೆ. . .
ಕರ್ನಾಟಕ ರಾಜ್ಯ ಸುವರ್ಣ ಮಹೋತ್ಸವದ ಸುಸಂದರ್ಭದಲ್ಲಿ ಈ ಸಂಚಿಕೆಯನ್ನು ಸಾಕಾರಗೊಳಿಸಲು ಸಹಾಯ ಮಾಡಿದ ಎಲ್ಲಾ ಸದಸ್ಯರಿಗೆ ಧನ್ಯವಾದಗಳು. 'ಶ್ರೀಗಂಧ' ಕಿರು ಹೊತ್ತಿಗೆಯ ಉಪಸಂಪಾದಕರಾದ ಡಾ||ಪ್ರಮೋದ್ ಹಾಗೂ ಸಂಪಾದಕ ಮಂಡಳಿಯ ಸದಸ್ಯರುಗಳಾದ ಹೆಚ್.ಕೆ.ಮಧು, ಜೆ.ಜೆ.ಪಾಲ್, ರೂಪಾ ಪ್ರಮೋದ್, ಸುಧಾ ಪ್ರಭಾಕರ ಇವರಿಗೆ ನನ್ನ ವಂದನೆಗಳು. ಜಾಹಿರಾತುಗಳಿಗಾಗಿ ಶ್ರಮವಹಿಸಿ, ಸಕಾಲಕ್ಕೆ ಒದಗಿಸಿದ ಸದಸ್ಯರಿಗೆ, ಸ್ನೇಹಿತರಿಗೆ ಹಾಗೂ ಜಾಹಿರಾತುಗಳನ್ನು ನೀಡಿದ ನಗರದ ಸಂಸ್ಥೆಗಳಿಗೆ ನಾವು ಆಭಾರಿಗಳು.
ಈ ಸಂಚಿಕೆಯನ್ನು ಅಂದವಾಗಿ, ಅಚ್ಚುಕಟ್ಟಾಗಿ ಮುದ್ರಿಸಿ ಸಕಾಲಕ್ಕೆ ಒದಗಿಸಿದ ದೋಹಾ ಮಾಡರ್ನ್ ಮುದ್ರಣಾಲಯದ ತಂಡದವರಿಗೂ ನಮ್ಮ ಕೃತಜ್ಞತೆಗಳು. ಸಂಚಿಕೆಯ ಬಗೆಗಿನ ತಮ್ಮ ರಚನಾತ್ಮಕ ಟೀಕೆ-ಟಿಪ್ಪಣಿಗಳಿಗೆ ಸ್ವಾಗತ.

# ಕರ್ನಾಟಕ ಸಂಘದ ಆಡಳಿತ ಮಂಡಳಿ 2005-2006




**ಕೆ. ಪ್ರಭಾಕರ್**
ಅಧ್ಯಕ್ಷರು



**ಅರವಿಂದ ಪಾಟೀಲ್**
ಉಪಾಧ್ಯಕ್ಷರು



**ಶಾಮ ಸುಂದರ್**
ಕಾರ್ಯದರ್ಶಿ



**ಪಾಲ್ ಜೆ.ಜೆ.**
ಸಹ ಕಾರ್ಯದರ್ಶಿ



**ನಾಗೇಶ್ ರಾವ್**
ಖಜಾಂಚಿ



**ಅರುಣ್ ಕುಮಾರ್**
ಸಾಂಸ್ಕೃತಿಕ ಕಾರ್ಯದರ್ಶಿ



**ವೆಂಕಟೇಶ ಮೂರ್ತಿ**
ಸಹ ಸಾಂಸ್ಕೃತಿಕ ಕಾರ್ಯದರ್ಶಿ



**ಸಂಜಯ ಕುದರಿ**
ಕ್ರೀಡಾ ಕಾರ್ಯದರ್ಶಿ



**ದಿನೇಶ್ ಗೌಡ**
ಸಹ ಕ್ರೀಡಾ ಕಾರ್ಯದರ್ಶಿ



**ಮಧು ಹೆಚ್.ಕೆ.**
ಪಿ.ಆರ್.ಓ.



**ಶ್ಯಾಮ್ ಎನ್. ಸ್ವಾಮಿ**
ತೇಜಸ್ ಸಂಯೋಜಕರು



ಆಲೂರ್ ಎಸ್. ಎಸ್.

ಪ್ರಗತಿ ಸಂಯೋಜಕರು



ಶಾಲಿನಿ ಎಸ್. ಆಲೂರ್

ಸಂಪಾದಕರು




ಡಾ। ಪ್ರಮೋದ್

ಸಹ ಸಂಪಾದಕರು

## ಸಲಹಾ ಸಮಿತಿ



ಪ್ರಕಾಶ್ ಬಾಬು



ಎ.ಎನ್.ನಾಗರಾಜ



ಇಕ್ಬಾಲ್ ಮನ್ನಾ

## ಕಾರ್ಯಕಾರಿ ಸಮಿತಿ ಸದಸ್ಯರು



ಗೋಪಾಲ ಎ. ಎಮ್



ರವಿಕಿರಣ




ಕೆ. ನಾಗರಾಜ

## ಕಾರ್ಯಕಾರಿ ಸಮಿತಿ ಸಹ ಸದಸ್ಯರು



ಎ. ಸೂರ್ಯನಾರಾಯಣ



ಟಿ.ಕೆ.ಸುರೇಶ್

# ಪ್ರಗತಿ ಆಡಳಿತ ಮಂಡಳಿ 2005 – 2006



ಸುಧಾ ಪ್ರಭಾಕರ್
ಅಧ್ಯಕ್ಷರು



ನಿರ್ಮಲಾ ರಘುರಾಮನ್
ಕಾರ್ಯದರ್ಶಿ



ವೀಣಾ ರಾವ್
ಸಾಂಸ್ಕೃತಿಕ ಕಾರ್ಯದರ್ಶಿ



ಲತಾ ಪ್ರಭು
ಖಜಾಂಚಿ



ರೂಪಾ ಪ್ರಮೋದ್
ಕ್ರೀಡಾ ಕಾರ್ಯದರ್ಶಿ

## ಸಲಹಾ ಸಮಿತಿ



ವಿಮಲಾ ಪ್ರಕಾಶಬಾಬು